ಒ.ಎಸ್. - 83/2019

ಡಿ.ಡಬ್ಲ್ಯು. - 2

**ದಿನಾಂಕ 19-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - ವಾದಿಯವರ ಪರ ಮೇಡಂ ವಿವಿಆರ್ ವಕೀಲರಿಂದಃ**

ನೀವು ಏನು ಕೆಲಸವನ್ನು ಮಾಡುತ್ತೀರಿ ಎಂದರೆ ಮರದ ಕೆಲಸ ಮಾಡುತ್ತೇನೆ. ನೀವು ಎಲ್ಲಿ ಹುಟ್ಟಿ ಬೆಳಿದಿರುತ್ತೀರಿ ಹೆರ್ಗಾ ಗ್ರಾಮದ ಮುಂಡುಬೆಟ್ಟುವಿನಲ್ಲಿ ಹುಟ್ಟಿ ಬೆಳೆದಿರುತ್ತೇನೆ . ನಿಮ್ಮ ತಂದೆ ತಾಯಿಯವರಿಗೆ ನೀವು ಎಷ್ಟು ಜನ ಮಕ್ಕಳು ಎಂದರೆ 5 ಜನ ಮಕ್ಕಳು . ನೀವು ಎಲ್ಲರೂ ಒಟ್ಟಿಗೆ ಇರುತೀರಿ ಎಂದರೆ ನಾವು 3 ಜನ ಗಂಡು ಮಕ್ಕಳು ಮುಂಡುಬೆಟ್ಟುವಿನಲ್ಲಿ ಒಟ್ಟಿಗೆ ಇರುತ್ತೇವೆ. ನೀವು ವಿಶ್ವಕರ್ಮ ಸೇವಾ ಸಂಘದ ಸದಸ್ಯರಾಗಿರುತ್ತೀರಾ ಎಂದರೆ ನಾನು ಸದಸ್ಯನಾಗಿರುವುದಿಲ್ಲ ಆದರೇ ಅಲ್ಲಿಗೆ ಹೋಗಿ ಬರುತ್ತೇನೆ . ನೀವು ವಿಶ್ವಕರ್ಮ ಸೇವಾ ಸಂಘಕ್ಕೆ ಹೇಗೆ ಹೋಗುವುದು ಎಂದರೆ ಪ್ರತಿದಿನ ಬಿಡುವು ಇದ್ದಾಗ ಅಲ್ಲಿಗೆ ಹೋಗಿ ಬರುತ್ತೇನೆ . ನೀವು ಏನು ವಿದ್ಯಾಭ್ಯಾಸ ಮಾಡಿರುತ್ತೀರಿ ಎಂದರೆ 7 ನೇ ತರಗತಿವರೆಗೆ ಓದಿರುತ್ತೇನೆ . ನಿಮ್ಮ ಮುಖ್ಯವಿಚಾರಣೆಯ ಪ್ರಮಾಣ ಪತ್ರ ತಯಾರಿಸಲು ಯಾರು ಮಾಹಿತಿ ನೀಡಿದರು ಮತ್ತು ಅದರನ್ನು ಯಾರು ಬರೆದರು ಎಂದರೆ ನಾನು ಹೇಳಿದ ವಿಷಯಗಳನ್ನು ವಿಶ್ವಕರ್ಮ ಸೇವಾ ಸಂಘದ ಗೌರವಾನ್ವಿತ ವಕೀಲರಾದ ಮಿಥುನ್ ರವರು ಬರೆದರು. ಗೌರಾವನ್ವಿತ ವಕೀಲರಾದ ಮಿಥನ್ ರವರ ಕಚೇರಿಗೆ ನಿಮ್ಮನ್ನು ಯಾರು ಬರಲು ಹೇಳಿದರು ಎಂದರೆ ದಿವಾಕರ್ ರವರು ಹೇಳಿದರು. ನೀವು ಗೌರವಾನ್ವಿತ ವಕೀಲರಿಗೆ ಏನು ಹೇಳುತೀರಿ ಎಂದರೆ ನನ್ನ ಅನುಭವದಂತೆ ಸಾವಿತ್ರಿ ಆಚಾರ್ಯರವರ ಮನೆಯ ಬಳಿ ಇರುತ್ತೇನೆ, ವಿಶ್ವಕರ್ಮ ಸೇವಾ ಸಂಘಕ್ಕೆ ಹೋಗಿ ಬರುತ್ತೇನೆ, ಸಾವಿತ್ರಿ ಆಚಾರ್ಯ ರವರ ಪರಿಚಯ ಇರುತ್ತದೆ ಎಂದು ಹೇಳಿರುತ್ತೇನೆ . ಶಂಕ್ರಯ್ಯ ಆಚಾರ್ಯರವರ ತಾಯಿಯವರ ಹೆಸರು ಏನು ಎಂದರೆ ಅದು ನನಗೆ ಗೊತ್ತಿಲ್ಲ . ಶಂಕ್ರಯ್ಯ ಆಚಾರ್ಯರವರ ತಾಯಿ ಗೌರಮ್ಮ ನವರು ವಾಸ ಮಾಡಿಕೊಂಡು ಬಂದಿದ್ದ

ವಿಷಯ ಗೊತ್ತಿದಿದೆಯೇ ಎಂದರೆ ಇಲ್ಲ. ಗೌರಮ್ಮ ನವರು ಎಲ್ಲಿ ಮೃತರಾದರು ಎಂದು ಗೊತ್ತಿದಿಯೇ ಎಂದರೆ ಇಲ್ಲ. ಸಾವಿತ್ರಿ ಆಚಾರ್ಯರವರು ನಿಮ್ಮ ಪ್ರಕಾರ ಎಲ್ಲಿ ತೀರಿಕೊಂಡರು ಎಂದರೆ ಮುಂಡುಬೆಟ್ಟುವಿನಲ್ಲಿ ತೀರಿಕೊಂಡರು . ಶಂಕ್ರಯ್ಯ ಆಚಾರ್ಯ ನಿಮ್ಮ ಪ್ರಕಾರ ಎಲ್ಲಿ ತೀರಿಕೊಂಡರು ಎಂದರೆ ಮುಂಡುಬೆಟ್ಟುವಿನಲ್ಲಿ ತೀರಿಕೊಂಡರು .

ಶಂಕ್ರಯ್ಯ ಆಚಾರ್ಯರವರ ತಂದೆಯವರು ಹೆಸರು ನಿಮಗೆ ಗೊತ್ತಿದಿಯೇ ಎಂದರೆ ಇಲ್ಲ . ಶಂಕ್ರಯ್ಯ ಆಚಾರ್ಯ ರವರಿಗೆ ಅಣ್ಣ ತಮ್ಮಂದಿರು ಮತ್ತು ಅಕ್ಕ ತಂಗಿಯರು ಇದ್ದರೇ ಎಂದರೆ ಗೊತ್ತಿಲ್ಲ . ಸಾವಿತ್ರಿ ಆಚಾರ್ಯರವರ ತಂದೆ ತಾಯಿಯವರು ಯಾರು ಎಂದು ಗೊತ್ತಿದಿಯೇ ಎಂದರೆ ತಾಯಿಯವರು ಗೊತ್ತು ತಂದೆಯವರು ಗೊತ್ತಿಲ್ಲ. ಸಾವಿತ್ರಿ ಆಚಾರ್ಯ ರವರ ತಾಯಿಯವರ ಹೆಸರು ಏನು ಎಂದರೆ ಗೊತ್ತಿಲ್ಲ . ಸಾವಿತ್ರಿ ಆಚಾರ್ಯರವರ ತಂದೆ, ತಾಯಿಯವರು ಶಂಕ್ರಯ್ಯ ಆಚಾರ್ಯರವರೊಂದಿಗೆ ವಾಸವಾದಗಿದ್ದರೇ ಎಂದರೆ ತಾಯಿಯವರು ಇದ್ದರು ತಂದೆಯವರನ್ನು ನಾನು ನೋಡಿರುವುದಿಲ್ಲ. ಸಾವಿತ್ರಿ ಆಚಾರ್ಯ ರವರು ನಿಮಗೆ ಹೇಗೆ ಸಂಬಂಧಿಕರು ಎಂದರೆ ನನ್ನ ತಂದೆಯ ತಂದೆಯ ತಮ್ಮನ ಮಗಳು . ನಿಮ್ಮ ತಂದೆಯವರ ತಂದೆಯ ಹೆಸರು ಏನು ಎಂದರೆ ಕೃಷ್ಣಯ್ಯ ಆಚಾರ್ಯ. ನಿಮ್ಮ ತಂದೆಯವರ ತಂದೆಯ ತಮ್ಮನ ಹೆಸರು ಏನು ಎಂದರೆ ನೆನಪಿಲ್ಲ . ನಿಮ್ಮ ತಂದೆಯವರ ತಂದೆಯ ತಮ್ಮನಿಗೆ ಎಷ್ಟು ಜನ ಮಕ್ಕಳು ಎಂದರೆ ಗೊತ್ತಿಲ್ಲ . ನಿಮ್ಮ ತಂದೆಯವರ ತಂದೆಯ ತಮ್ಮನವರು ಎಲ್ಲಿ ವಾಸ ವಾಗಿದ್ದರು ಎಂದರೆ ಮುಂಡುಬೆಟ್ಟಿವಿನಲ್ಲಿ ಸಾವಿತ್ರಿ ಆಚಾರ್ಯರವರ ಮನೆಯಲ್ಲಿ ವಾಸವಾಗಿದ್ದರು . ನಿಮ್ಮ ತಂದೆಯವರ ತಂದೆಯ ತಮ್ಮನ ಹೆಂಡತಿಯ ಹೆಸರು ಏನು ಎಂದರೆ ಗೊತ್ತಿಲ್ಲ . ನಿಮ್ಮ ತಂದೆಯವರ ತಂದೆಯ ತಮ್ಮ ಮತ್ತು ಅವರ ಹೆಂಡತಿ ಯಾವಾಗ ತೀರಿಕೊಂಡರು ಎಂದರೆ ಗೊತ್ತಿಲ್ಲ . ಅವರು ಎಲ್ಲಿ ತೀರಿಕೊಂಡರು ಎಂದರೆ ಮುಂಡುಬೆಟ್ಟಿವಿನಲ್ಲಿ ತೀರಿಕೊಂಡರು. ಯಾರು ಈ ವಿಚಾರ ನಿಮಗೆ ತಿಳಿಸಿದರು ಎಂದರೆ ನನ್ನ ತಂದೆಯವರು ತಿಳಿಸಿದರು . ನಿಮ್ಮ ತಂದೆಯವರು ಯಾವಾಗ ತೀರಿಕೊಂಡರು ಎಂದರೆ 12-04-2015 ರಲ್ಲಿ ತೀರಿಕೊಂಡರು . ನಿಮ್ಮ ತಾಯಿಯವರು ಇದ್ದಾರೆಯೇ ಎಂದರೆ ಅವರು 4 ವರ್ಷದ ಹಿಂದೆ

ತೀರಿಕೊಂಡಿರುತ್ತಾರೆ. ಈ ದಾವೆಯನ್ನು ಯಾರು ಯಾರ ವಿರುದ್ಧ ಏಕೆ ಸಲ್ಲಿಸಿದ್ದಾರೆ ಎಂದು ನಿಮಗೆ ತಿಳಿದಿದೆಯೇ ಎಂದರೆ ವಿಶ್ವಕರ್ಮ ಒಕ್ಕೂಟದವರು ವಿಶ್ವಕರ್ಮ ಸಂಘದವರು ಜಾಗವನ್ನು ಬಿಟ್ಟು ಹೋಗಬೇಕು ಎಂದು ಕೋರಿ ಸಲ್ಲಿಸಿರುತ್ತಾರೆ . ದಾವಾ ಆಸ್ತಿಯ ಸರ್ವೆ ನಂ ಮತ್ತು ವಿಸ್ತೀರ್ಣ ಎಷ್ಟು ಎಂದರೆ 61 ಸೆಂಟ್ಸ್ ಎಂದು ಸಾವಿತ್ರಿ ಆಚಾರ್ಯ ರವರು ಹೇಳಿದ್ದರು ಆದರೇ ಯಾವ ಸರ್ವೆ ನಂಬರ್ ಎಂದು ಗೊತ್ತಿಲ್ಲ .

ಸಾವಿತ್ರಿ ಆಚಾರ್ಯ ರವರು ದಾವಾ ಆಸ್ತಿಯ ವಿಸ್ತೀರ್ಣದ ಬಗ್ಗೆ ನಿಮಗೆ ಯಾವಾಗ ಹೇಳಿದ್ದರು ಎಂದರೆ ಸುಮಾರು 15 ವರ್ಷದ ಹಿಂದೆ ಹೇಳಿದ್ದರು . ದಾವಾ ಆಸ್ತಿಯು ನಿಮ್ಮ ಪ್ರಕಾರ ಮೊದಲು ಯಾರ ಹೆಸರಿನಲ್ಲಿ ಇತ್ತು ಎಂದರೆ ಸಾವಿತ್ರಿ ಆಚಾರ್ಯ ರವರ ತಂದೆಯವರ ಹೆಸರಿನಲ್ಲಿತ್ತು. ನಂತರ ದಾವಾ ಆಸ್ತಿಯು ಯಾರು ಹೆಸರಿಗೆ ಬಂದಿತ್ತು ಎಂದರೆ ಶಂಕ್ರಯ್ಯ ಆಚಾರ್ಯ ರವರು ಡಿಕ್ಲರೇಶನ್ ಸಲ್ಲಿಸಿ ತಮ್ಮ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದು ನನ್ನ ತಂದೆಯವರು ನನಗೆ ತಿಳಿಸಿದರು. ನಿಮ್ಮ ತಂದೆಯವರ ಕುಟುಂಬದಲ್ಲಿ ಹಿರಿಯ ವ್ಯಕ್ತಿ ಯಾರು ಇದ್ದಾರೆ ಎಂದರೆ ಯಾರು ಇಲ್ಲ . ನಿಮ್ಮ ತಾಯಿಯ ಕುಟುಂಬದಲ್ಲಿ ಹಿರಿಯ ವ್ಯಕ್ತಿ ಯಾರು ಇದ್ದಾರೆ ಎಂದರೆ ಯಾರು ಇಲ್ಲ. ಸಾವಿತ್ರಿ ಆಚಾರ್ಯರವರು ನಿಮ್ಮ ಸಂಬಂಧಿಕರು ಎಂದು ಹೇಳಲು ನೀವು ಈಗ ಹೇಳಿದ ಸಾಕ್ಷ್ಯವನ್ನು ಹೊರತುಪಡಿಸಿ ದಾಖಲೆಗಳು ಏನಾದರೂ ಇದೆಯೇ ಎಂದರೆ ಇಲ್ಲ . ಶಂಕ್ರಯ್ಯ ಆಚಾರ್ಯರವರು ವಿಶ್ವಕರ್ಮ ಒಕ್ಕೂಟದ ಸದಸ್ಯರಾಗಿ ಹಲವು ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಅವರು ಸದಸ್ಯರಾಗಿ ಇರಲೇ ಇಲ್ಲ . ಶಂಕ್ರಯ್ಯ ಆಚಾರ್ಯ ರವರು ವಿಶ್ವಕರ್ಮ ಒಕ್ಕೂಟದ ಸದಸ್ಯರಾಗಿ ಇರಲಿಲ್ಲ ಎಂದು ನೀವು ಯಾವ ಆದಾರದ ಮೇಲೆ ಹೇಳುವುದು ಎಂದರೆ ಶಂಕ್ರಯ್ಯ ಆಚಾರ್ಯ ರವರೇ ನಮಗೆ ಹೇಳಿದ್ದರು ಅದರ ಮೇಲೆ ಹೇಳಿರುತ್ತೇನೆ. ಶಂಕ್ರಯ್ಯ ಆಚಾರ್ಯ ರವರು ನಿಮಗೆ ಯಾವಾಗ ಹೇಳಿದ್ದರು ಎಂದರೆ ಅವರು ಜೀವಂತ ಇದ್ದಾಗ ಅವರ ಮನೆಯಲ್ಲಿ ಕಾರ್ಯಕ್ರಮಗಳು ಇದ್ದಾಗ ಹೋಗುತಿದ್ದೆನು ಆ ಸಮಯದಲ್ಲಿ ಹೇಳಿದ್ದರು . ಶಂಕ್ರಯ್ಯ ಆಚಾರ್ಯರವರು ನಿಮಗೆ ಹೇಳುವ ಸಮಯದಲ್ಲಿ ನೀವು ಅಲ್ಲದೇ ಬೇರೆ ಯಾರು ಇದ್ದರು ಎಂದರೆ ಅವರ ಹೆಂಡತಿ

ಇದ್ದರು . ಶಂಕ್ರಯ್ಯ ಆಚಾರ್ಯ ರವರು ವಿಶ್ವಕರ್ಮ ಸಂಘದ ಸದಸ್ಯರಾಗಿದ್ದರು ಎಂದು ನಿಮಗೆ ಯಾರು ಹೇಳಿದರು ಎಂದರೆ ನಾನು ಸಂಘಕ್ಕೆ ಹೋಗುತಿದ್ದಾಗ ಅವರು ಅಲ್ಲಿ ಇರುತಿದ್ದರು ಹಾಗೇ ನನಗೆ ತಿಳಿದಿದೆ . ವಿಶ್ವಕರ್ಮ ಸಂಘದ ಸದಸ್ಯರ ಪಟ್ಟಿಯನ್ನು ನೀವು ನೋಡಿರುತೀರಾ ಎಂದರೆ ನೋಡಿರುವುದಿಲ್ಲ ಮುಂದುವರಿದು ಶಂಕ್ರಯ್ಯ ಆಚಾರ್ಯರವರೇ ನಾನು ವಿಶ್ವಕರ್ಮ ಸಂಘದ ಸದಸ್ಯನಾಗಿದ್ದೇನೆ ಎಂದು ತಿಳಿಸಿದ್ದರು . ನೀವು ವಿಶ್ವಕರ್ಮ ಸಮುದಾಯಕ್ಕೆ ಸೇರಿದವರೇ ಎಂದರೆ ಹೌದು. ವಿಶ್ವಕರ್ಮ ಒಕ್ಕೂಟವು ಅವಿಭಜಿತ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ವಿಶ್ವಕರ್ಮ ಸಮದಾಯದ ನೊಂದಾಯಿತವಾದ ಒಕ್ಕೂಟ ಎಂದರೆ ಹೌದು .

ಅಲೆವೂರು ಪ್ರಭಾಕರ ಆಚಾರ್ಯ , ಡಾ . ದಾಸಚಾರ್ಯ , ಲಕ್ಷ್ಮಣ ಆಚಾರ್ಯ , ಕೇಶವ ಆಚಾರ್ಯ, ಅನಂತಯ್ಯ ಆಚಾರ್ಯರವರು ಒಕ್ಕೂಟದ ಹಾಗೂ ನಿಮ್ಮ ಸಮುದಾಯದ ಮುಖಂಡರಾಗಿದ್ದರು ಎಂದರೆ ಹೌದು. ಅಲೆವೂರು ಪ್ರಭಾಕರ ಆಚಾರ್ಯ ರವರ ತಮ್ಮ ಯೋಗಿಶ್ ಆಚಾರ್ಯರವರು ವಿಶ್ವಕರ್ಮ ಒಕ್ಕೂಟದ ಹಾಗೂ ವಿಶ್ವಕರ್ಮ ಸಮುದಾಯದ ಮುಖಂಡರಾಗಿ ಕೆಲಸವನ್ನು ಮಾಡುತಿದ್ದಾರೆ ಎಂದರೆ ಹೌದು. ಅವರು ವಿಶ್ವಕರ್ಮ ಸಮುದಾಯದ ಅಭಿವೃದ್ದಿಗೆ ಹಾಗೂ ಸಮುದಾಯದ ದುರ್ಬಲ ವ್ಯಕ್ತಿಗಳಿಗೆ ಸಹಾಯಮಾಡುವ ಕೆಲಸವನ್ನು ಮಾಡುತಿದ್ದರು ಎಂದರೆ ಗೊತ್ತಿಲ್ಲ . ವಿಶ್ವಕರ್ಮ ಒಕ್ಕೂಟವು ವಿಶ್ವಕರ್ಮ ಸಮುದಾಯದ ಅಭಿವೃದ್ದಿಗೆ ಇರುವಂತಹ ಒಂದು ಸಂಸ್ಥೆಯಾಗಿದೆ ಎಂದರೆ ಹೌದು . ವಾದಿಯವರು ವಿಶ್ವಕರ್ಮ ಸಮುದಾಯದ ಸದಸ್ಯರಿಗೆ ಸಂಬಂಧಿಸಿದ ಶ್ರೇಯೋಭಿವೃದ್ದಿ ಕಾರ್ಯಗಳನ್ನು ಮಾಡುತ್ತಾ ಬರುತಿದ್ದಾರೆ ಎಂದರೆ ಗೊತ್ತಿಲ್ಲ. ಶಂಕ್ರಯ್ಯ ಆಚಾರ್ಯರವರ ತಾಯಿಯವರಾದ ಗೌರಮ್ಮನವರ ಆರೋಗ್ಯವು ಸರಿ ಇಲ್ಲದ ಸಮಯದಲ್ಲಿ ವಾದಿ ಸಂಸ್ಥೆಯ ಮುಖಂಡರು ಅವರನ್ನು ಆಸ್ಪತ್ರೆಗೆ ಸೇರಿಸಿ ಅವರ ಔಷಧಿ, ಖರ್ಚು ವೆಚ್ಚಗಳನ್ನು ನೋಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಶಂಕ್ರಯ್ಯ ಆಚಾರ್ಯ ರವರು ಹಾಗೂ ಅವರ ಹೆಂಡತಿಯವರು ಅನಾರೋಗ್ಯಕ್ಕೆ ಒಳಗಾದಾಗ ವಾದಿ ಸಂಸ್ಥೆಯವರು ಅವರ ಔಷದಿ ಖರ್ಚುಗಳು ದಿನನಿತ್ಯದ ಖರ್ಚುಗಳನ್ನು ಹಾಗೂ

ಯೋಗಕ್ಷೇಮವನ್ನು ನೋಡಿಕೊಂಡು ಬರುತಿದ್ದರು ಎಂದರೆ ಇಲ್ಲ. ಶಂಕ್ರಯ್ಯ ಆಚಾರ್ಯ ಮತ್ತು ಅವರ ಹೆಂಡತಿಯವರ ಆರೋಗ್ಯ ಸರಿ ಇಲ್ಲದಿದ್ದಾಗ ಯಾರು ನೋಡಿಕೊಳ್ಳುತಿದ್ದರು ಎಂದರೆ ನನ್ನ ತಂದೆಯವರು ನೋಡಿಕೊಳ್ಳುತಿದ್ದರು. ಶಂಕ್ರಯ್ಯ ಆಚಾರ್ಯ ಮತು ಅವರ ಹೆಂಡತಿಯವರು ಎಷ್ಟು ವರ್ಷಗಳ ಕಾಲ ಅನಾರೋಗ್ಯದಿಂದ ಬಳಳಿದ್ದರು ಎಂದರೆ ಅವರು ಕೆಲಸವನ್ನು ಮಾಡುತಿದ್ದರು ಆಗಾಗ ಸ್ವಲ್ಪ ಸೌಖ್ಯವನ್ನು ತಪ್ಪುತಿದ್ದರು . ನಿಮ್ಮ ಪ್ರಕಾರ ಶಂಕ್ರಯ್ಯ ಆಚಾರ್ಯ ಮತ್ತು ಅವರ ಹೆಂಡತಿಯವರು ತೀರಿಕೊಳ್ಳುವರೆಗೆ ಅವರ ದೈಹಿಕ ಹಾಗೂ ಮಾನಸಿಕ ಆರೋಗ್ಯಗಳು ಸರಿ ಇತ್ತು ಎಂದರೆ ಹೌದು .

ವಿಶ್ವಕರ್ಮ ಸೇವಾ ಸಂಘದ ಕಚೇರಿಯು ಶಂಕ್ರಯ್ಯ ಆಚಾರ್ಯ ರವರು ಬದುಕಿರುವ ಕಾಲದಲ್ಲಿ ಎಲ್ಲಿ ಇತ್ತು ಎಂದರೆ ನಾವು ಕಚೇರಿ ಮಾಡಿರಲಿಲ್ಲ ಸಂಘದ ಕಚೇರಿ ಇರಲಿಲ್ಲ ಎನ್ನುತ್ತಾರೆ. ವಿಶ್ವಕರ್ಮ ಸೇವಾ ಸಂಘದ ಸಭೆಯ ಎಲ್ಲಿ ನಡೆಯುತಿತ್ತು ಎಂದರೆ ಅಲ್ಲಲ್ಲಿ ನಡೆಯುತಿತ್ತು ಅದಕ್ಕೆ ನಿಕರವಾದ ಸ್ಥಳ ಇರಲಿಲ್ಲ. ಶಂಕ್ರಯ್ಯ ಅಚಾರ್ಯರವರು ತೀರಿಕೊಂಡ ನಂತರ ದಾವಾ ಆಸ್ತಿಯಲ್ಲಿ ವಿಶ್ವಕರ್ಮ ಸೇವಾ ಸಂಘವನ್ನು ಮಾಡಿದ್ದೆ ಎಂದರೆ ಶಂಕ್ರಯ್ಯ ಆಚಾರ್ಯ ರವರ ಅನಾರೋಗ್ಯಕ್ಕೆ ಒಳಗಾದಾಗ ನಾವು ನೋಡಲು ಹೋಗುತಿದ್ದ ಸಮಯದಲ್ಲಿ ಇಲ್ಲಿ ಮಾಡಿ ಎಂದು ತಿಳಿಸಿದ್ದರು . ವಿಶ್ವಕರ್ಮ ಸೇವಾ ಸಂಘಕ್ಕೆ ದಾವಾ ಆಸ್ತಿಯ ಮೇಲೆ ಹಕ್ಕು ಇದೆಯೇ ಎಂದರೆ ಶಂಕ್ರಯ್ಯ ಆಚಾರ್ಯ ರವರು ಕೊಡುತ್ತೇನೆ ಎಂದು ಹೇಳಿದ್ದರು . ಶಂಕ್ರಯ್ಯ ಆಚಾರ್ಯರವರು ವಿಶ್ವಕರ್ಮ ಸೇವಾ ಸಂಘಕ್ಕೆ ದಾವಾ ಆಸ್ತಿಯನ್ನು ಕೊಟ್ಟಿದ್ದಾರೆಯೇ ಎಂದರೆ ಸಾಕ್ಷಿಯವರು ಮೊದಲು ಕೊಡುತ್ತೇನೆ ಎಂದು ಹೇಳಿದ್ದರು ಎಂದು ಹೇಳಿ ಮತ್ತೆ ಕೊಟ್ಟಿದ್ದಾರೆ ಎಂದು ಹೇಳಿರುತ್ತಾರೆ . ನಿಮಗೆ ದಾವಾ ಆಸ್ತಿಯನ್ನು ಶಂಕ್ರಯ್ಯ ಆಚಾರ್ಯರವರು ಕೊಟ್ಟಿದಾರೆಯೇ ಎಂದರೆ ಅರ್ಧ ಆಸ್ತಿಯನ್ನು ಕೊಡುತ್ತೇನೆ ಎಂದು ಹೇಳಿದ್ದರು. ದಿ.14-08-2003 ರ ವೀಲುನಾಮೆಯ ಮೂಲಕ ಶಂಕ್ರಯ್ಯ ಆಚಾರ್ಯರವರು ದಾವಾ ಆಸ್ತಿಯನ್ನು ವಿಶ್ವಕರ್ಮ ಒಕ್ಕೂಟಕ್ಕೆ ಕೊಟ್ಟಿರುತ್ತಾರೆ ಎನ್ನುವ ವಿಚಾರ ಗೊತ್ತಿದಿಯೇ ಎಂದರೆ ಅವರು ಕೊಟ್ಟಿರುವುದಿಲ್ಲ. ಶಂಕ್ರಯ್ಯ ಆಚಾರ್ಯರವರು ವಿಶ್ವಕರ್ಮ ಒಕ್ಕೂಟಕ್ಕೆ ವೀಲುನಾಮೆಯನ್ನು ಬರೆದಿಲ್ಲ

ಎಂದು ಹೇಗೆ ಹೇಳುವುದು ಎಂದರೆ ಶಂಕ್ರಯ್ಯ ಆಚಾರ್ಯರವರು ಒಕ್ಕೂಟದ ಸದಸ್ಯರು ಆಗಿರಲಿಲ್ಲ ಹಾಗಾಗೀ ಒಕ್ಕೂಟಕ್ಕೆ ಬರೆದಿರುವುದಿಲ್ಲ. ಶಂಕ್ರಯ್ಯ ಆಚಾರ್ಯರವರು ಮತ್ತು ಅವರ ಹೆಂಡತಿಯವರು ತೀರಿಕೊಂಡ ನಂತರ ಅವರ ಎಲ್ಲಾ ಕಾರ್ಯಗಳು ಎಲ್ಲಿ ಆಗಿರುತ್ತದೆ ಎಂದರೆ ವಿಘ್ನೇಶ್ವರ ಸಭಾಭವನದಲ್ಲಿ ನಾವು ಮಾಡಿರುತ್ತೇವೆ. ಶಂಕ್ರಯ್ಯ ಆಚಾರ್ಯರವರು ಮತ್ತು ಅವರ ಹೆಂಡತಿಯವರ ವೈಕುಂಟ ಸಮರಾಧನೆಯ ಆಹ್ವಾನ ಪತ್ರಿಕೆಯನ್ನು ಯಾರ ಹೆಸರಿನಲ್ಲಿ ಮಾಡಿರುವುದು ಎಂದರೆ ಆಹ್ವಾನ ಪತ್ರವನ್ನು ಮಾಡಿರುವುದಿಲ್ಲ ಬಾಯಿ ಮಾತಿನ ಮೂಲಕ ಹೇಳಿರುತ್ತೇವೆ. ಶಂಕ್ರಯ್ಯ ಆಚಾರ್ಯರವರು ಮತ್ತು ಅವರ ಹೆಂಡತಿಯವರ ವೈಕುಂಟ ಸಮರಾಧನೆಯ ಕಾರ್ಯಕ್ರಮವನ್ನು ಹಾಗೂ ಅದರ ಖರ್ಚು ವೆಚ್ಚಗಳನ್ನು ವಿಶ್ವಕರ್ಮ ಒಕ್ಕೂಟದವರೇ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಶಂಕ್ರಯ್ಯ ಆಚಾರ್ಯರವರು ಮತ್ತು ಅವರ ಹೆಂಡತಿಯವರ ಶವಸಂಸ್ಕಾರವನ್ನು ವಿಶ್ವಕರ್ಮ ಒಕ್ಕೂಟದವರೇ ಮಾಡಿಸಿರುತ್ತಾರೆ ಎಂದರೆ ಹೌದು . ನೀವು ವಿಶ್ವಕರ್ಮ ಸೇವಾ ಸಂಘದ ಕ್ರೀಯಾಶೀಲಾ ವ್ಯಕ್ತಿಯಾಗಿದ್ದು ಅವರು ಹೇಳಿಕೊಟ್ಟಂತೆ ಸುಳ್ಳು ಸಾಕ್ಷಿಯನ್ನು ಹೇಳುತಿದ್ದೀರಿ ಎಂದರೆ ಸರಿಯಲ್ಲ .

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.